## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1351** |
| ಉತ್ತರಿಸಬೇಕಾದ ದಿನಾಂಕ | : | 09.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಬಸವ ವಸತಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ 2016-17, 2017-18 ಮತ್ತು 2019-20 ನೇ ಸಾಲಿನಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆಯೇ ; | ಆಯವ್ಯಯದಲ್ಲಿ ಜಿಲ್ಲಾವಾರು ಅನುದಾನವನ್ನು ಹಂಚಿಕೆ ಮಾಡದೇ ಯೋಜನೆವಾರು ಮಾತ್ರ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದ್ದು, ನಿಗಮವು ವಿವಿಧ ವಸತಿ ಯೋಜನೆಗಳಡಿ ಆಯ್ಕೆಗೊಂಡ ಫಲಾನುಭವಿಗಳಿಗೆ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br><br>ಅದರಂತೆ ವಿಜಯಪುರ ಜಿಲ್ಲೆಯಲ್ಲಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಬಸವ ವಸತಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ 2016-17, 2017-18 ಮತ್ತು 2019-20 ನೇ ಶ್ರೇಣಿಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಈ ವರಗೆ ಒಟ್ಟಾರೆಯಾಗಿ ರೂ.504.34 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಯೋಜನಾವಾರು ಮತ್ತು ಶ್ರೇಣಿವಾರು ಅನುದಾನದ ವಿವರ ಕೆಳಕಂಡಂತಿದೆ. |

(ರೂ.ಕೋಟಿಗಳಲ್ಲಿ)

| ಯೋಜನೆ | ಶ್ರೇಣಿ | ಬಿಡುಗಡೆ ಮಾಡಲಾದ ಅನುದಾನ |
|---|---|---|
| ಬಸವ ವಸತಿ ಯೋಜನೆ | 2016-2017 | 75.17 |
| | 2017-2018 | 165.23 |
| **ಒಟ್ಟು** | | **240.40** |
| ಡಾ\|\|ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ -ಗ್ರಾಮೀಣ | 2016-2017 | 51.77 |
| | 2017-2018 | 182.83 |
| **ಒಟ್ಟು** | | **234.60** |
| ಪ್ರಧಾನ ಮಂತ್ರಿ ಆವಾಸ್ ಯೋಜನೆ ಗ್ರಾಮೀಣ | 2016-2017 | 18.54 |
| | 2017-2018 | 7.42 |
| | 2019-2020 | 3.38 |
| **ಒಟ್ಟು** | | **29.34** |
| **ಒಟ್ಟಾರೆ** | | **504.34** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ | ವಿಜಯಪುರ ಜಿಲ್ಲೆಯಲ್ಲಿ ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಬಸವ ವಸತಿ ಯೋಜನೆ, ಪ್ರಧಾನ ಮಂತ್ರಿ |

| | | |
|---|---|---|
| | ವಿವರ ನೀಡುವುದು) | ಆವಾಜ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ 2016-17 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ಒಟ್ಟು 50397 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಯೋಜನವಾರು ವಿವರ ಕೆಳಕಂಡಂತಿದೆ. |

| ಯೋಜನೆ | ಶ್ರೇಣಿ | ಆಯ್ಕೆ | ಪೂರ್ಣ | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ರದ್ದಾದ ಮನೆಗಳು |
|---|---|---|---|---|---|---|
| ಬಸವ ವಸತಿ ಯೋಜನೆ | 2016-17 | 7662 | 5234 | 1798 | 1 | 629 |
| | 2017-18 | 19700 | 11999 | 5473 | 0 | 2228 |
| **ಒಟ್ಟು** | | **27362** | **17233** | **7271** | **1** | **2857** |
| ಡಾ\|\|ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾ) | 2016-17 | 4396 | 3276 | 833 | 0 | 287 |
| | 2017-18 | 14974 | 9484 | 3997 | 25 | 1468 |
| **ಒಟ್ಟು** | | **19370** | **12760** | **4830** | **25** | **1755** |
| ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) | 2016-17 | 1811 | 1353 | 312 | 0 | 146 |
| | 2017-18 | 833 | 577 | 182 | 0 | 74 |
| | 2019-20 | 1021 | 162 | 473 | 386 | 0 |
| **ಒಟ್ಟು** | | **3665** | **2092** | **967** | **386** | **220** |
| **ಅಂತೂ ಒಟ್ಟು** | | **50397** | **32085** | **13068** | **412** | **4832** |

| | | |
|---|---|---|
| ಇ) | ಈ ಯೋಜನೆಯಡಿಯಲ್ಲಿ 2 ಮತ್ತು 3 ನೇ ಬಿಲ್‌ಗಳ ಬಾಕಿ ಉಳಿಸಿಕೊಂಡಿರುವ ಮೊತ್ತ ಎಷ್ಟು? (ಸಂಪೂರ್ಣ ವಿವರ ನೀಡುವುದು) | ವಿವಿಧ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರವು ಆದೇಶ ಸಂಖ್ಯೆ: ವಇ 154 ಹೆಚ್‌ಎಹೆಚ್ 2019, ದಿನಾಂಕ:16.11.2019 ರಲ್ಲಿ ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪುನರ್ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿತ್ತು. ಇದರಿಂದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯು ವಿಳಂಬವಾಗುತ್ತಿರುವುದನ್ನು ಸರ್ಕಾರವು ಮನಗಂಡು ಆದೇಶ ಸಂಖ್ಯೆ: ವಇ 75 ಹೆಚ್‌ಎಹೆಚ್ 2021, ದಿನಾಂಕ:07.09.2021 ರಲ್ಲಿ ವಿಜಿಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ಮತ್ತಷ್ಟು ಸರಳೀಕರಿಸಿ In-House ಮೂಲಕ ಅಭಿವೃದ್ಧಿಪಡಿಸಿರುವ "Indira-Vigil" ಆ್ಯಪ್ ಮೂಲಕ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆಗೆ ಅನುಮತಿ ನೀಡಿರುತ್ತದೆ. ಅದರಂತೆ ವಿವಿಧ ವಸತಿ ಯೋಜನೆಗಳಡಿ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಯಾವುದೇ ವಿಳಂಬವಾಗದಂತೆ ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡನೆಗೊಂಡ |

| | | |
|---|---|---|
| | | ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತುತ ಬಾಕಿ ಇರುವುದಿಲ್ಲ.<br><br>ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತುತ ಬಾಕಿ ಇರುವುದಿಲ್ಲ. |

ಸಂಖ್ಯೆ :ವಇ 122 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು